ಓ ಎಸ್ ನಂಃ 43/2019
ಪಿ. ಡಬ್ಲ್ಯೂ ಃ 1

**ದಿಃ 20.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**
**ಪಾಟೀ ಸವಾಲು ಃ ಪ್ರತಿವಾದಿ 1 ರವರ ಪರ ಶ್ರೀ ಎ ಎಸ್ ಎಸ್ ವಕೀಲರಿಂದ ಃ**

ನನಗೆ ಓದು ಬರಹ ಬರುವುದಿಲ್ಲ. ನನ್ನ ಮದುವೆಯಾಗಿ 12 ವರ್ಷಗಳಾಗಿವೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುವ ವಿಳಾಸದಲ್ಲಿ ವಾಸವಾಗಿರುತ್ತೇನೆ. ನನಗೆ ಜಮೀನು ಮತ್ತು ಮನೆಯಲ್ಲಿ ಭಾಗ ಬೇಕೆಂದು ದಾವೆ ಹೂಡಿರುತ್ತೇನೆ. ನಾನು 3 ಐಟಂಗಳಿಗೆ ದಾವೆ ಹಾಕಿರುತ್ತೇನೆ. ಸದರಿ ಐಟಂ ಗಳು ಸ.ನಂ. 30/1 ರ 3 ಎಕರೆ 2 ಗುಂಟೆ , 30/4 ರಲ್ಲಿ 15 ಗುಂಟೆ ಮತ್ತು ಒಂದು ಮಾಳಿಗೆ ಮನೆ ಮತ್ತು ಶೀಟಿನ ಮನೆಗಾಗಿ ದಾವೆ ಹಾಕಿರುತ್ತೇನೆ. ಪ್ರತಿವಾದಿ 4 ನಮ್ಮ ಕುಟುಂಬಕ್ಕೆ ಸೇರಿದವರಿರುವುದಿಲ್ಲ ಎಂದರೆ ಸರಿ. ಪ್ರತಿವಾದಿ 4 ರವರು ನಾನು ಜಮೀನು, ಹೊಲ ಮಾಡುವಾಗ ಅವರು ತಕರಾರು ಮಾಡಿರುವ ಕಾರಣ ಅವರನ್ನು ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇನೆ. ಪ್ರತಿವಾದಿ 4 ರವರು ದಾವಾ ಸ್ವತ್ತು ಅವರಿಗೆ ಸೇರಿರುತ್ತದೆ ಎಂದು ತಕರಾರು ಮಾಡಿರುವ ಕಾರಣ ನಾನು ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ.

ದಾವಾ ಐಟಂ 3 ಮತ್ತು 4 ಪ್ರತಿವಾದಿ 1 ರವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ . 1ನೆ ಪ್ರತಿವಾದಿಗೆ 3 ಜನ ಮಕ್ಕಳಿದ್ದು, ಅವರೆಂದರೆ ನಾನು, ಪ್ರತಿವಾದಿ 2 ಮತ್ತು ಪ್ರತಿವಾದಿ 3 ರವರು ಆಗಿರುತ್ತಾರೆ. ನನಗೆ ದಾವಾ ಸ್ವತ್ತುಗಳಲ್ಲಿ ಎರಡು ಭಾಗದ ಹಕ್ಕು ಇರುತ್ತದೆ. ಮನೆಯಲ್ಲಿ ಒಂದು ಭಾಗದ ಹಕ್ಕು ಇರುತ್ತದೆ. ಸ್ವಯಾರ್ಜಿತ ಆಸ್ತಿ ಎಂದು ಗೊತ್ತಿದ್ದರೂ ನಾನು ಯಾವ ಕಾರಣಕ್ಕೆ ದಾವಾ ಐಟಂ ನಂಬರ್ 3 ಮತ್ತು 4 ನ್ನು ಸೇರಿಸಿರುತ್ತೇನೆ ಎಂದರೆ ಸಾಕ್ಷಿಯು ದಾವಾ ಹಾಕುವ ದಿನಗಳಲ್ಲಿ ನನಗೆ ಅದರ ಬಗ್ಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ಆಸ್ತಿಗಳ ಪಹಣಿ ಮತ್ತು ಮ್ಯುಟೇಷನ್ ತೆಗೆಸಿದಾಗ ನನಗೆ ಅದರ ಬಗ್ಗೆ ಗೊತ್ತಾಯಿತು. ದಾವಾ ಐಟಂ ನಂಬರ್ 3 ಮತ್ತು 4 ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ಗೊತ್ತಿದ್ದರೂ ಕಾನೂನು ಬಾಹಿರವಾಗಿ ಅದನ್ನು ಸೇರಿಸಿರುತ್ತೇನೆ ಎಂದರೆ ಸಾಕ್ಷಿಯು ನನಗೆ ಗೊತ್ತಾಗದೇ ಸೇರಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆಯವರು ಕೂಲಿ ಮಾಡಿ, ಮರದ ವ್ಯಾಪಾರ ಮಾಡಿ ಖರೀದಿ ಮಾಡಿರುವ ಸ್ವತ್ತಾಗಿರುತ್ತದೆ ಎಂದರೆ ಸರಿ. ನಾನು 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳನ್ನು ಸೇರಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಮಾಗಡಿ**